**ಸರ್ವ ಶಿಕ್ಷಣ ಅಭಿಯಾನ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಎಡುಸ್ಯಾಟ್-ಮೀನಾ-03/2009-10 ದಿನಾಂಕ: 15-07-09

## ಸುತ್ತೋಲೆ

**ವಿಷಯ:** ಮೀನಾ ಕಾರ್ಯಕ್ರಮದಡಿ ದಿನಾಂಕ: 25-07-09 ರಂದು ಆಯೋಜಿಸಲಾಗಿರುವ ಟೆಲಿಕಾನ್ಫರೆನ್ಸ್ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ.

**ಉಲ್ಲೇಖ** : ಈ ಕಛೇರಿ ಸುತ್ತೋಲೆ ಸಂಖ್ಯೆ ಸ.ಶಿ.ಅ/ಹೆ.ಶಿ/ಮಾ.ಸೂ/9/2009-10 ದಿನಾಂಕ :24.06.2009

*****

ಮೇಲಿನ ವಿಷಯದನ್ವಯ, 2009-10 ನೇ ಸಾಲಿನಲ್ಲಿ ಎನ್.ಪಿ.ಇ.ಜಿ.ಇ.ಎಲ್. ಅಡಿ 'ಮೀನಾ' ಕಾರ್ಯಕ್ರಮವನ್ನು ಮಾದರಿ ಕ್ಲಸ್ಟರ್‌ನ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅನುಷ್ಠಾನ ಮಾಡಲು ಉಲ್ಲೇಖಿತ ಸುತ್ತೋಲೆಯನ್ವಯ ಸೂಚಿಸಿರುವುದು ಸರಿಯಷ್ಟೆ. ಈ ಹಿನ್ನೆಲೆಯಲ್ಲಿ ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮ ಜಾರಿಯಲ್ಲಿರುವ ಬ್ಲಾಕ್ ವ್ಯಾಪ್ತಿಯ ಆಯ್ದ ಹಿರಿಯ ಪ್ರಾಥಮಿಕ ಶಾಲೆಗಳ ಮಕ್ಕಳು ಮತ್ತು ಶಿಕ್ಷಕರಿಗಾಗಿ **ದಿನಾಂಕ: 25-07-2009** ರಂದು ಟೆಲಿಕಾನ್ಫರೆನ್ಸ್ ಕಾರ್ಯಕ್ರಮ ಆಯೋಜಿಸಲಾಗಿದೆ.

- ಈ ಕಾರ್ಯಕ್ರಮವು ಗುಲ್ಬರ್ಗಾ ಜಿಲ್ಲೆಯಲ್ಲಿ ಸುಸ್ಥಿತಿಯಲ್ಲಿರುವ ಎಡುಸ್ಯಾಟ್ ಶಾಲೆಗಳ ಸ್ವೀಕೃತಿ ಕೇಂದ್ರಗಳಲ್ಲಿ ಹಾಗೂ ಎನ್.ಪಿ.ಇ.ಜಿ.ಇ.ಎಲ್ ಬ್ಲಾಕ್ ನ ಬಿ.ಆರ್.ಸಿ. ಸ್ವೀಕೃತಿ ಕೇಂದ್ರದಲ್ಲಿ ನಡೆಸಲಾಗುವುದು. ಸದರಿ ಸ್ವೀಕೃತಿ ಕೇಂದ್ರಗಳಲ್ಲಿ ಸೂಚನೆಯಂತೆ ಮಕ್ಕಳು ಮತ್ತು ಶಿಕ್ಷಕರು ಹಾಜರಿರುವಂತೆ ವ್ಯವಸ್ಥೆ ಮಾಡುವುದು.
- ಸಂಬಂಧಿಸಿದ ಬಿ.ಇ.ಓ., ಬಿ.ಆರ್.ಸಿ, ಸಿ.ಎ.ಇ.ಓ, ಸಿ.ಆರ್.ಪಿ. ಮತ್ತು ಜೆಂಡರ್ ಕೋ-ಆರ್ಡಿನೇಟರ್‌ಗಳು ಭಾಗವಹಿಸುವುದು.
- ಈ ಕಾರ್ಯಕ್ರಮಕ್ಕೆ ಪ್ರತಿ ಶಾಲೆಯಿಂದ ಮೂವರು ವಿದ್ಯಾರ್ಥಿನಿಯರು ಮತ್ತು ಇಬ್ಬರು ವಿದ್ಯಾರ್ಥಿಗಳಂತೆ ಒಟ್ಟು ಐದು ವಿದ್ಯಾರ್ಥಿಗಳು ಮತ್ತು ಸಂಬಂಧಿಸಿದ ಮೀನಾ ಕಾರ್ಯಕ್ರಮದ ಉಸ್ತುವಾರಿ ಶಿಕ್ಷಕರನ್ನು ನಿಯೋಜಿಸುವುದು. ಒಟ್ಟಾರೆ ಪ್ರತಿ ಬ್ಲಾಕ್‌ನಲ್ಲಿ 10 ಶಾಲೆಗಳಿಂದ 50 ಮಕ್ಕಳನ್ನು ಹಾಗೂ 10 ಶಿಕ್ಷಕರನ್ನು ಸ್ವೀಕೃತಿ ಕೇಂದ್ರಗಳಿಗೆ ನಿಯೋಜಿಸಲು ಸೂಚಿಸಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಬ್ಲಾಕ್ ಹಂತದ ಸ್ವೀಕೃತಿ ಕೇಂದ್ರ ಗಳ ಜೊತೆಗೆ ಸುಸ್ಥಿತಿಯಲ್ಲಿರುವ ಎಡುಸ್ಯಾಟ್ ಶಾಲೆಗಳ ಸ್ವೀಕೃತಿ ಕೇಂದ್ರಗಲ್ಲಿಯೂ ಹತ್ತಿರದ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರು ಮತ್ತು ಮಕ್ಕಳನ್ನು ತೊಡಗಿಸಿಕೊಂಡು ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ಟೆಲಿಕಾನ್ಫರೆನ್ ಕಾರ್ಯಕ್ರಮವು **ಮುಂಜಾನೆ 10.30 ಯಿಂದ 12.30** ಗಂಟೆಯವರೆಗೆ ನಡೆಯುತ್ತದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಮಕ್ಕಳು 6 ಮತ್ತು 7 ನೇ ತರಗತಿಯವರಾಗಿರಬೇಕು ಮತ್ತು ಉತ್ತಮ ಸಂವಹನ ಸಾಮರ್ಥ್ಯ ಹೊಂದಿರಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಚುರುಕಾದ ಮಕ್ಕಳನ್ನು ಕಾರ್ಯಕ್ರಮಕ್ಕೆ ನಿಯೋಜಿಸುವುದು.
- ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಮಕ್ಕಳಿಗೆ ನೈಜ ಪ್ರಯಾಣ ದರವನ್ನು ಮತ್ತು ಲಘು ಉಪಹಾರವನ್ನು ನೀಡುವುದು. ಇದಕ್ಕೆ ತಗಲುವ ವೆಚ್ಚವನ್ನು ತರಬೇತಿ ಅನುದಾನದಲ್ಲಿ ಭರಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಇವರಿಗೆ-ಅಗತ್ಯ ಕ್ರಮಕ್ಕಾಗಿ**

- ಡಿಡಿಪಿಐ ಮತ್ತು ಡಿವೈಪಿಸಿ, ಗುಲ್ಬರ್ಗಾ ಇವರಿಗೆ ಅಗತ್ಯ ಕ್ರಮಕ್ಕಾಗಿ
- ಸಂಬಂಧಿಸಿದ ಜಿಲ್ಲೆಗಳ ಡಯಟ್ ಪ್ರಾಂಶುಪಾಲರು
- ಎನ್‌ಪಿಇಜಿಇಎಲ್ ಕಾರ್ಯಕ್ರಮ ಅನುಷ್ಠಾನದಲ್ಲಿರುವ ಬ್ಲಾಕ್‌ಗಳ ಬಿ.ಇ.ಓ. ಮತ್ತು ಬಿ.ಆರ್.ಸಿಗಳು

**ಇವರಿಗೆ-ಮಾಹಿತಿಗಾಗಿ**

- ರಾಜ್ಯ ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ, #631, 22 ನೇ ಮೇನ್ ರೋಡ್, ಬಿ.ಎಂ.ಟಿ.ಸಿ, ಬಸ್ ಡಿಪೋ ಹತ್ತಿರ, 4 ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು
- ಶ್ರೀಮತಿ ಲಕ್ಷ್ಮೀ ಹರಿಹರನ್, ನಿರ್ದೇಶಕರು, ಸೃಷ್ಟಿ ಸಂಸ್ಥೆ, 205, ಫರ್ನ್ ಹೆಬಿಟೇಟ್, ದೊಡ್ಡನೆಕುಂಡಿ, ಮಾರತ್‌ಹಳ್ಳಿ ಹೊರ ವರ್ತುಲ ರಸ್ತೆ, ಬೆಂಗಳೂರು-560037.